**ಅಸಲು ದಾವ ಸಂಖ್ಯೆಃ 292/2022**

**ಡಿ.ಡಬ್ಲೂ -1**

**ದಿಃ24-04-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ವಾದಿಪರ ವಕೀಲರಾದ ಶ್ರೀ YGG ರವರಿಂದಃ-**

1. ನಾನು ಅನಕ್ಷರಸ್ಥನಾಗಿರುತ್ತೇನೆ. ನಾಗೇಶ ನಾರಾಯಣ ಸಾವಗಾಂವಕರ ಎಂದರೆ ವಾದಿ ನನ್ನ ಸಹೋದರನಾಗಿರುತ್ತಾನೆ. ವಾದಿ ನನ್ನ ವಿರುದ್ಧ ಯಾವ ಉದ್ದೇಶಕ್ಕಾಗಿ ದಾವೆ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಸಲ್ಲಿಸಿರುವ ಲಿಖಿತ ಹೇಳಿಕೆಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಲಿಖಿತ ಹೇಳಿಕೆಯಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ತಿಳಿದಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವುದನ್ನು ನಾನು ಓದಿರುವುದಿಲ್ಲ.

2. ನಾರಾಯಣ ಸಾವಗಾಂವಕರ ಎಂದರೆ ನನ್ನ ತಂದೆ. ನಾಗೇಶ, ಮಹಾದೇವ, ಕಲ್ಲಪ್ಪ ಎಂಬ ಮೂರು ಜನ ಮಕ್ಕಳು ನಾರಾಯಣ ಸಾವಗಾಂವಕರ ರವರಿಗೆ ಇರುತ್ತಾರೆ ಎಂದರೆ ಸಾಕ್ಷಿ ಇವರ ಜೊತೆ ಐದು ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ನನ್ನ ಸಹೋದರಿಯರ ಹೆಸರನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಅವರ ಹೆಸರುಗಳನ್ನು ನಮೂದು ಮಾಡಲು ನನಗೆ ತೊಂದರೆ ಇರಲಿಲ್ಲ ಆದರೆ ಅವರು ಯಾವುದೇ ತಕರಾರು ಮಾಡದೇ ಇದ್ದ ಕಾರಣ ನಮೂದು ಮಾಡಿರುವುದಿಲ್ಲ. ನನ್ನ ಸಹೋದರ ಕಲ್ಲಪ್ಪಾ ರವರು ಕುಟುಂಬದ ಆಸ್ತಿಗಳಲ್ಲಿ ವಿಭಾಗ ಆದ ನಂತರ ಬೇರೆಯಾಗಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಹಂಗರಗಾದಲ್ಲಿರುವ ಹಳೆಯ ಮನೆ ಕಲ್ಲಪ್ಪ ರವರಿಗೆ ವಾಟ್ನಿ ಪ್ರಕಾರ ಹೋಗಿರುತ್ತದೆ ಎಂದರೆ ಸಾಕ್ಷಿ ಹಳೆಯ ಮನೆಯಲ್ಲಿ ಮೂರು ಭಾಗಗಳಾಗಿದ್ದು ಒಂದು ಭಾಗ ನಾಗೇಶ ರವರಿಗೆ, ಒಂದು ಭಾಗ ನನಗೆ ಹಾಗೂ ಮತ್ತೊಂದು ಭಾಗ

ಕಲ್ಲಪ್ಪ ರವರಿಗೆ ಹೋಗಿತ್ತು ಎಂದು ನುಡಿಯುತ್ತಾರೆ. ಹಳೆಯ ಮನೆ ಕಲ್ಲಪ್ಪ ರವರ ಹಿಸ್ಸೆಗೆ ಹೋದಾಗ ದಾವಾ ಸ್ವತ್ತನ್ನು ನನ್ನ ಹಾಗೂ ವಾದಿಯ ಹಿಸ್ಸೆಗೆ ನೀಡಲಾಗಿತ್ತುಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಖರೀದಿಸಿದ್ದರು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಮ್ಮ ತಂದೆ ಯಾವಾಗ ವಿಭಾಗ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ದಾವಾ ಸ್ವತ್ತಿನಲ್ಲಿ ಯಾವುದೂ ವಿಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನಗೆ ಹಾಗೂ ವಾದಿಗೆ ಮಾತ್ರ ಸಂಬಂಧಪಟ್ಟ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ತನ್ನ ತಂದೆಯ ಜೀವಿತಾವಧಿಯಲ್ಲಿ ನಾಗೇಶ ಎಂದರೆ ವಾದಿಗೆ ಹಣ ಕೊಟ್ಟು ತನಗೆ ದಾವಾ ಸ್ವತ್ತನ್ನು ಕೊಟ್ಟಿರುವುದಾಗಿ ನುಡಿಯುತ್ತಾರೆ. ವಾದಿಗೆ 25,000/- ಹಣವನ್ನು ನಾನೇ ಕೊಟ್ಟಿರುತ್ತೇನೆ. ಯಾವ ತಾರೀಕಿನಂದು ಹಣ ಕೊಟ್ಟಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ಹಣ ಕೊಟ್ಟ ಬಗ್ಗೆ ನಾನು ದಾಖಲೆ ಹಾಜರುಪಡಿಸಿರುತ್ತೇನೆ. ನಾನು ವಾದಿಗೆ ಹಣ ಕೊಟ್ಟಿರುತ್ತೇನೆ ಎಂದು ಇರುವ ದಾಖಲೆಯನ್ನು ಹಾಜರಪಡಿಸಿರುತ್ತೇನೆ. ಈಗ ನಾನು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡುತ್ತಿದ್ದು ಅವುಗಳಲ್ಲಿ ನಾನು ವಾದಿಗೆ ಹಣ ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿ ಸದರಿ ದಾಖಲೆಗಳಲ್ಲಿ ಆ ದಾಖಲೆ ಇರುವುದಿಲ್ಲ ಆದರೆ ಬೇರೆ ದಾಖಲೆ ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ. ವಾದಿಗೆ ನಾನು 25,000/- ಹಣ ಕೊಟ್ಟು ದಾವಾ ಸ್ವತ್ತು ನನ್ನ ಹೆಸರಿಗೆ ಪಡೆದಿರುತ್ತೇನೆ ಎಂಬ ವಿಚಾರವನ್ನು ನಾನು ನನ್ನ ಲಿಖಿತ ಹೇಳಿಕೆ ಅಥವಾ ಮುಖ್ಯ ವಿಚಾರಣೆಯಲ್ಲಿ ಎಲ್ಲಿಯೂ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ವಾದಿಯು ಆ ರೀತಿ ಹಣ ಪಡೆದು ದಾವಾ ಸ್ವತ್ತನ್ನು ನನ್ನ ಹೆಸರಿಗೆ ಬಿಟ್ಟುಕೊಟ್ಟಿರುವ ಬಗ್ಗೆ ಬರೆದುಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ವಾದಿ ಆ ರೀತಿ ಪಂಚಾಯತಿಯಲ್ಲಿ ಬರೆದು ಕೊಟ್ಟಿರುವುದಾಗಿ ನುಡಿಯುತ್ತಾರೆ. ನಾನು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಇವತ್ತಿನವರೆಗೂ ವಾದಿಯು ದಾವಾ ಸ್ವತ್ತು ನನಗೆ ಸೇರಬೇಕು ಎಂದು ಲಿಖಿತವಾಗಿ ಯಾವುದೇ ಕಾಗದ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆಯ

ವಾರಸುದಾರರಾಗಿ ನಾನು ಹಾಗೂ ವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸಾಕ್ಷಿ ಅವರ ಜೊತೆ ತಮ್ಮ ಸಹೋದರ ಕಲ್ಲಪ್ಪ ಸಹ ಇರುತ್ತಾರೆ ಎಂದು ನುಡಿಯುತ್ತಾರೆ. ವಾಟ್ನಿಯಲ್ಲಿ ನಮ್ಮ ತಂದೆ ಹಳೆಯ ಮನೆಯನ್ನು ಕಲ್ಲಪ್ಪ ರವರಿಗೆ ಕೊಟ್ಟಿದ್ದರು ಹಾಗೂ ದಾವಾ ಸ್ವತ್ತನ್ನು ನನಗೆ ಹಾಗೂ ವಾದಿಗೆ ಕೊಟ್ಟಿದ್ದರು ಎಂದರೆ ಸರಿ. ವಾದಿಯು 25,000/- ಹಣ ಪಡೆದು ದಾವಾ ಸ್ವತ್ತನ್ನು ನನಗೆ ಬಿಟ್ಟುಕೊಟ್ಟಿರುವ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**